ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಶಾಲೆಗಳಲ್ಲಿರುವ ಶಿಕ್ಷಕರ ಖಾಲಿ ಹುದ್ದೆಗಳು

೨೧೭೭. **ಶ್ರೀ ಯು. ಭೂಪತಿ (ಸಂಡೂರು).**—ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಸರ್ಕಾರೀ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ? ಪ್ರಮಾಣಗಳಿಗನುಗುಣವಾಗಿ ಶಿಕ್ಷಕರ ಖಾಲೀ ಇರುವ ಹುದ್ದೆಗಳ ಸಂಖ್ಯೆ ಎಷ್ಟು? ಸದರಿ ಹುದ್ದೆಗಳು ಯಾವಾಗಿನಿಂದ ಖಾಲಿ ಇವೆ? ಜಿಲ್ಲಾವಾರು ಮಾಹಿತಿ ನೀಡುವುದು ?

ಆ) ಹಾಗಿದ್ದಲ್ಲಿ ಸದರಿ ಹುದ್ದೆಗಳನ್ನು ಭರ್ತಿಮಾಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು).—

ಅ) ರಾಜ್ಯದಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ (ಪ್ರೌಢ) ಶಾಲೆಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ.

ಪ್ರಾಥಮಿಕ ಶಾಲೆಗಳು	ಮಾಧ್ಯಮಿಕ (ಪ್ರೌಢ) ಶಾಲೆಗಳು
೬೨,೮೮,೦೦೦	೧೦,೭೩,೦೦೦

ರಾಜ್ಯದಲ್ಲಿ ಸರ್ಕಾರೀ ಪ್ರಾಥಮಿಕ ಶಾಲೆಗಳಲ್ಲಿ ೪೮೦೭ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಮಾಧ್ಯಮಿಕ (ಪ್ರೌಢ) ಶಾಲೆಗಳಲ್ಲಿ ೧೦೪೪ ಶಿಕ್ಷಕರ ಹುದ್ದೆಗಳು (೧೯೮೭ರಂತೆ) ಖಾಲಿ ಇವೆ. ಈ ಹುದ್ದೆಗಳು ಸುಮಾರು ಒಂದು ವರ್ಷದಿಂದ ಮೂರು ವರ್ಷಗಳವರೆಗೂ ಖಾಲಿ ಇವೆ, (ಜಿಲ್ಲಾವಾರು ಹುದ್ದೆಗಳ ಮಾಹಿತಿ ಲಗತ್ತಿಸಿದೆ)

ಆ) ಖಾಲೀ ಇರುವ ಹುದ್ದೆಗಳನ್ನು ತುಂಬಲು ಈಗಾಗಲೇ ನೇಮಕಾತಿ ಸಮಿತಿಗಳನ್ನು ರಚಿಸಲಾಗಿದ್ದು, ಅರ್ಜಿಗಳನ್ನು ಸ್ವೀಕರಿಸಿ ಪರಿಶೀಲನೆ ನಡೆದಿದೆ. ಸಂದರ್ಶನಗಳನ್ನು ಕೂಡಲೇ ನಡೆಸಿ ಭರ್ತಿ ಮಾಡಲು ನಿರ್ದೇಶನ ನೀಡಲಾಗಿದೆ.

ರಾಜ್ಯದಲ್ಲಿ ಖಾಲಿ ಇರುವ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರುಗಳ ಹುದ್ದೆಗಳ ಜಿಲ್ಲಾವಾರು ವಿವರಗಳು

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಇರುವ ಹುದ್ದೆಗಳ ಸಂಖ್ಯೆ	ಪ್ರೌಢ ಶಾಲಾ ಶಿಕ್ಷಕರ ಖಾಲಿ ಇರುವ ಹುದ್ದೆಗಳ ಸಂಖ್ಯೆ	
೧	ಬೆಂಗಳೂರು ಗ್ರಾ. ಜಿಲ್ಲೆ	೩೧೦	೬೭	
೨	ಬೆಂಗಳೂರು ದಕ್ಷಿಣ ಜಿಲ್ಲೆ	–	೫೪	
೩	ಚಿತ್ರದುರ್ಗ	೨೨೮	೬೨	
೪	ಕೋಲಾರ	೩೦೦	೮೯	
೫	ಶಿವಮೊಗ್ಗ	೨೫೫	೪೮	
೬	ತುಮಕೂರು	೩೪೩	೮೦	
೭	ಮೈಸೂರು	೩೫೫	೩೧	
೮	ಮಂಡ್ಯ	೩೨೬	೫೯	ಒಂದು ವರ್ಷ
೯	ದಕ್ಷಿಣ ಕನ್ನಡ	೧೫೦	೮೨	ದಿಂದ
೧೦	ಹಾಸನ	೨೨೦	೪೫	ಮೂರು
೧೧	ಚಿಕ್ಕಮಗಳೂರು	೨೦೦	೬೧	ವರ್ಷಗಳಿಂದ
೧೨	ಕೊಡಗು	೮೬	೬೨	ಲೂ ಖಾಲೀ
೧೩	ಬೆಳಗಾಂ	೩೭೪	೩೧	ಇವೆ.
೧೪	ಬಿಜಾಪುರ	೩೧೬	೨೪	
೧೫	ಧಾರವಾಡ	೪೧೦	೨೬	
೧೬	ಉತ್ತರ ಕನ್ನಡ	೧೪೬	೨೭	
೧೭	ಗುಲ್ಬರ್ಗ	೨೧೨	೩೫	
೧೮	ರಾಯಚೂರು	೨೫೬	೩೭	
೧೯	ಬಳ್ಳಾರಿ	೧೬೧	೩೪	
೨೦	ಬೀದರ್	೧೬೨	೪೨	
೨೧	ಬೆಂಗಳೂರು ಉತ್ತರ	–	೪೨	
	ಒಟ್ಟು	೪೪೦೭	೧೦೪೪	

ಗೋಕಾಕ್ ಮತ ಕ್ಷೇತ್ರದಲ್ಲಿ ಸರ್ಕಾರಿ ಹೈಸ್ಕೂಲು ಕಟ್ಟಡ ಕುರಿತಂ

೧೫೬೪. ಶ್ರೀ ಎಂ. ಎಲ್. ಮಾತ್ತಣ್ಣನವರ್ (ಗೋಕಾಕ್) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗೋಕಾಕ್ ಮತ ಕ್ಷೇತ್ರದ ಉರಬಿನಹಟ್ಟಿ, ಕೊಳವಿಗಳಲ್ಲಿ ಸರ್ಕಾರದವರಂ ನಡೆಸುವ ಹೈಸ್ಕೂಲುಗಳಿಗೆ ಕಟ್ಟಡಗಳಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಶಾಲಾ ಕಟ್ಟಡಗಳನ್ನು ಕಟ್ಟಲು ಯೋಜನೆಯೇನಾದರೂ ಹಾಕಿಕೊಳ್ಳಲಾಗಿದೆಯೇ ? ಮತ್ತು ಅವುಗಳ ಅಂದಾಜು ವೆಚ್ಚವೆಷ್ಟು ?

ಇ) ಯಾವಾಗ ಈ ಶಾಲಾ ಕಟ್ಟಡಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು ?